# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 80/2023**

| | | | |
|---|---|---|---|
| ಹೆಸರು | : | ಅಶೋಕ ಕಟಾರಿ | ಫ್ರಾಸಾ-2 |
| ತಂದೆಯ ಹೆಸರು | : | ಪುಂಡಲೀಕಪ್ಪ | ಚಾಸಾ-3 |
| ವರ್ಷ | : | 40 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಸಿಂಧಗಿ, ತಾಃ ಬಾಗಲಕೋಟೆ | |

ದಿಃ 23.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ಈಗ ಅಂದಾಜು ಎರಡು ವರ್ಷಗಳ ಹಿಂದೆ ನನಗೆ ಪರಿಚಯವಿದ್ದ ಬಾಯವ್ವ ಎನುನವವಳು ಮೃತಪಟ್ಟಿದ್ದು, ಆಕೆಯ ಶವ ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿರುವದು ತಿಳಿದು ಅಲ್ಲಿಗೆ ಹೋಗಿದ್ದಾಗ, ರಾತ್ರಿ ಸುಮಾರು 9 ಗಂಟೆಗೆ ಪೊಲೀಸರು ನನ್ನನ್ನು ಮತ್ತು ಚಾಸಾ-2/ಕಮಲವ್ವ ರವರನ್ನು ಕರೆದು, ಮೃತ ಬಾಯವ್ವಳ ಶವದ ಮೇಲೆ ಶವ ಪಂಚನಾಮೆ ಜರುಗಿಸಬೇಕಾಗಿದೆ ಅದಕ್ಕೆ ಪಂಚರಾಗಿ ಸಹಕರಿಸಲು ಕೋರಿಕೊಂಡಿದ್ದು,ಅದಕ್ಕೆ ಒಪ್ಪಿಕೊಂಡಿರುತ್ತೇವೆ. ನಂತರ ನಮ್ಮನ್ನು ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಕರೆದುಕೊಂಡು ಹೋಗಿ ಬಾಯವ್ವಳ ಶವವನ್ನು ತೋರಿಸಿ, ನಮ್ಮ ಸಮಕ್ಷಮ ಶವ ಪಂಚನಾಮೆ ಜರುಗಿಸಿರುತ್ತಾರೆ. ಶವ ಪಂಚನಾಮೆ ಕಾಲಕ್ಕೆ ಮೃತ ಬಾಯವ್ವಳ ತಲೆಯ ಮೇಲೆ, ತಲೆಯ ಮುಂಭಾಗ, ಬಲಗಣ್ಣು, ಬಲ ಕೆನ್ನೆ ಮೇಲೆ, ಗದ್ದದ ಮೇಲೆ ಗಾಯಗಳಾಗಿದ್ದವು. ಸಾಕ್ಷಿ ಶವ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಿಪಿ-5 ಪಂಚನಾಮೆ ಕಾಲಕ್ಕೆ ಭಾವಚಿತ್ರಗಳನ್ನು ಸಹ ತೆಗೆಯಲಾಯಿತು. ಸದರಿ ಭಾವಚಿತ್ರಗಳನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಶ್ರೀ. ಪಿ ಹೆಚ್ ಎಂ ವಕೀಲರಿಂದ** ಆರೋಪಿತಳ ಪರ

ಚಾಸಾ-1 ಮತ್ತು ಚಾಸಾ-8 ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಾನು ಒಕ್ಕಲುತನ ಮಾಡುತ್ತೇನೆ. ಘಟನೆ ಆಗಿದೆ ಎಂದು ಹೇಳುವ ದಿನ ಸಂಜೆ ಸುಮಾರು 7-30 ಅಥವಾ 8 ಗಂಟೆಯವರೆಗೆ ಇದ್ದೆ. ಪೊಲೀಸರು ನನಗೆ ಪೋನ ಕರೆ ಮಾಡಿ ಆಸ್ಪತ್ರೆಗೆ ಬರುವಂತೆ ತಿಳಿಸಿರುವುದಿಲ್ಲ. ನನ್ನಂತೆ ನಮ್ಮ ಊರಿನಿಂದ ಬಾಯವ್ವಳ ಶವ ನೋಡಲು ಸುಮಾರು 20 ಜನ

ಹೋಗಿದ್ದೆವು. ಪೊಲೀಸರು ನನ್ನನ್ನು ಸುಮಾರು 9 ಗಂಟೆ ನಂತರ ಶವ ಪಂಚನಾಮೆಗೆ ಪಂಚಸಾಕ್ಷಿಯಾಗಿ ಸಹಕರಿಸಲು ಕೋರಿಕೊಂಡಿರುತ್ತಾರೆ.

2. ಜಿಲ್ಲಾ ಆಸ್ಪತ್ರೆಯ ಶವಾಗಾರ ಯಾವ ದಿಕ್ಕಿಗೆ ಇರುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಪೊಲೀಸರು ನನ್ನನ್ನು ಶವ ಪಂಚನಾಮೆಗೆ ಬರಬೇಕು ಎಂದು ಕೋರಿಕೊಂಡಿರುವುದಿಲ್ಲ ಹಾಗೂ ನನ್ನ ಸಮಕ್ಷಮ ನಿಪಿ-5 ರಂತೆ ಯಾವುದೇ ಶವ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಜೊತೆಯಲ್ಲಿ ಚಾಸಾ-2/ಕಮಲವ್ವ ರವರು ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-5 ಪಂಚನಾಮೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲ.
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 80/2023**

| | | |
|---|---|---|
| ಹೆಸರು | : ಬಸಪ್ಪ ಮೇಟಿ | ಫ್ರಾಸಾ-1 |
| ತಂದೆಯ ಹೆಸರು | : ಮಲ್ಲಪ್ಪ | ಚಾಸಾ-1 |
| ವರ್ಷ | : 30 ವರ್ಷ | |
| ಉದ್ಯೋಗ | : ಒಕ್ಕಲುತನ | |
| ವಿಳಾಸ | : ಸಿಂಧಗಿ ತಾಃ ಬಾಗಲಕೋಟೆ | |

ದಿಃ 23.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಬಾಯವ್ವ ನನ್ನ ತಾಯಿ. ಚಾಸಾ-9/ಮಲ್ಲಪ್ಪ ನನ್ನ ತಂದೆ. ಈಗ ಒಂದುವರೆ ತಿಂಗಳುಗಳ ಹಿಂದೆ ನನ್ನ ತಂದೆ ಚಾಸಾ-9 ಮೃತಪಟ್ಟಿರುತ್ತಾರೆ. ನಮ್ಮ ತಂದೆ ತಾಯಿಗೆ ನಾವು ಒಟ್ಟು 4 ಜನ ಮಕ್ಕಳು. ಅವರಲ್ಲಿ 3 ಜನ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕೊಡಲಾಗಿದೆ. ಚಾಸಾ-10/ ಯಂಕಪ್ಪ ನನ್ನ ಚಿಕ್ಕಪ್ಪ. ನ್ಯಾಯಾಲಯದ ಮುಂದಿರುವ ಆರೋಪಿತಳು ನನ್ನ ಚಿಕ್ಕಮ್ಮ ಮತ್ತು ಚಾಸಾ-10 ರವರ ಹೆಂಡತಿ. ನನ್ನ ತಾಯಿ ಬಾಯವ್ವ ಮತ್ತು ಆರೋಪಿತಳು ಖಾಸ ಅಕ್ಕ-ತಂಗಿಯರು. ನಮ್ಮ ಮನೆಯಲ್ಲಿ ನಾನು, ನನ್ನ ತಂದೆ-ತಾಯಿ, ಚಾಸಾ-10 ಮತ್ತು ಆರೋಪಿತಳು ವಾಸವಾಗಿರುತ್ತೇವೆ. ನಮ್ಮ ಮನೆಯನ್ನು ನಮ್ಮ ಜಮೀನಿನಲ್ಲಿ ಕಟ್ಟಿಕೊಂಡಿರುತ್ತೇವೆ. ಸದರಿ ಜಮೀನನ್ನು ಹೊರತುಪಡಿಸಿ 2 ಕಿ.ಮೀ ಅಂತರದಲ್ಲಿ ನಕ್ಕರಗುಂದಿ ಹದ್ದಿಯಲ್ಲಿ ಇನ್ನೊಂದು ಜಮೀನು ಇರುತ್ತದೆ. ನನ್ನ ತಾಯಿ ಬಾಯವ್ವರವರಿಗೆ ಹುಟ್ಟಿನಿಂದಲೂ ಬಲಗಾಲಿನಲ್ಲಿ ನಿಶ್ಶಕ್ತಿ ಇದ್ದು, ಅಂಕವಿಕಲೆ ಆಗಿದ್ದಳು ಮತ್ತು ಆಕೆಗೆ ಸುಮಾರು 10 ವರ್ಷಗಳಿಂದ ಸಕ್ಕರೆ ಕಾಯಿಲೆ ಇತ್ತು. ಆರೋಪಿತಳಿಗೆ ಅವರ ದಾಂಪತ್ಯದಿಂದ ಮಕ್ಕಳು ಆಗಿರುವುದಿಲ್ಲ.

2. ನನ್ನ ತಾಯಿ ಮತ್ತು ಆರೋಪಿತಳ ಮಧ್ಯ ಸಣ್ಣ ಪುಟ್ಟ ವಿಚಾರಗಳಿಗೆ ಆಗಾಗ ಜಗಳವಾಗುತ್ತಿತ್ತು. ಈ ವಿಚಾರವಾಗಿ ನಮ್ಮ ಊರಿನ ಹಿರಿಯರನ್ನು ಕರೆಯಿಸಿ, ಅವರಿಗೆ ಬುದ್ಧಿವಾದ ಹೇಳಿಸಿದ್ದೆವು. ಆ ಸಮಯದಲ್ಲಿ ಆರೋಪಿತಳು ನನ್ನ ತಾಯಿ ಜೊತೆ ಕೂಡಿ ಇರಲು ಆಗುವುದಿಲ್ಲ ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ಇರುತ್ತೇನೆ ಎಂದು ಹೇಳಿದ್ದಳು. ಆದರೆ ನಮ್ಮ ಜಮೀನುಗಳನ್ನು ನಾವು ಮತ್ತು ನನ್ನ ಚಿಕ್ಕಪ್ಪ/ಚಾಸಾ-10 ರವರು ಕೂಡಿ ಉಳುಮೆ ಮಾಡುತ್ತಿದ್ದೆವು.

3.	ಘಟನೆ ಆಗುವ 2 ವರ್ಷಗಳ ಹಿಂದೆ ಆರೋಪಿತಳು ಟಕ್ಕಳಕಿ ಗ್ರಾಮದಲ್ಲಿರುವ ಆಕೆಯ ನಾದಿನಿಯ ಮಗಳು/ಲಕ್ಷ್ಮೀ ನನಗೆ ಕೊಟ್ಟು ಮದುವೆ ಮಾಡಬೇಕು ಎಂದು ಅಂದುಕೊಂಡಿದ್ದಳು. ಆದರೆ ಅದಕ್ಕೆ ನನ್ನ ತಾಯಿ ಲಕ್ಷ್ಮಿ ಬಹಳ ವಿದ್ಯಾಭ್ಯಾಸ ಮಾಡಿರುತ್ತಾನೆ ಮನೆಗೆ ಹೊಂದಿಕೊಳ್ಳುವುದಿಲ್ಲ ಎಂದು ಒಪ್ಪಿಕೊಂಡಿರಲಿಲ್ಲ. ಆದರೂ ಸಹ ಆರೋಪಿತಳು ಲಕ್ಷ್ಮೀಯನ್ನು ನನಗೆ ಕೊಟ್ಟು ಮದುವೆ ಮಾಡಿಸಬೇಕು ಎಂದು ಹೇಳುತ್ತಿದ್ದಳು.

4.	ದಿಃ 09.08.2023 ರಂದು ಬೆಳಿಗ್ಗೆ ನಾನು ಜಮೀನಗೆ ಹೋಗುವ ಮುನ್ನ ಆರೋಪಿತಳಿಗೆ ಆಶಾಡ ಮಾಸ ಮುಗಿಯುತ್ತಾ ಬಂದಿದೆ, ಶ್ರಾವಣ ಮಾಸದಲ್ಲಿ ಲಕ್ಷ್ಮೀ ಜೊತೆ ಲಗ್ನವನ್ನು ನಿಶ್ಚಿಯಿಸುವಂತೆ ತಿಳಿಸಿರುತ್ತೇನೆ. ನಂತರ ನಾನು, ನನ್ನ ತಂದೆ ಚಾಸಾ-9, ನನ್ನ ಚಿಕ್ಕಪ್ಪ ಚಾಸಾ-10 ರವರು ನಕ್ಕರಗುಂದಿ ಗ್ರಾಮದ ಹದ್ದಿಯಲ್ಲಿರುವ ನಮ್ಮ ಜಮೀನಗೆ ಹೋಗಿರುತ್ತೇವೆ. ಮನೆಯಲ್ಲಿ ನನ್ನ ತಾಯಿ ಮತ್ತು ಆರೋಪಿತಳು ಉಳಿದುಕೊಂಡಿದ್ದರು.

5.	ನಾನು ಜಮೀನಿನಲ್ಲಿ ಇದ್ದಾಗ ನಮ್ಮ ಅತ್ತೆ ಚಾಸಾ-18/ದುಂಡವ್ವ ರವರು ನನಗೆ ಕರೆ ಮಾಡಿ, ಸುನಗದಲ್ಲಿರುವ ಅವರ ಸಂಬಂಧಿಕರಿಗೆ ಹುಷಾರಿಲ್ಲ ಅವರನ್ನು ನೋಡಿಕೊಂಡು ಬರಲು ಹೋಗುತ್ತಿದ್ದು, ನನ್ನ ತಾಯಿಯನ್ನು ಸಹ ಕರೆದುಕೊಂಡು ಬರುವಂತೆ ಮಧ್ಯಾಹ್ನ 12 ಗಂಟೆಗೆ ನನಗೆ ತಿಳಿಸಿರುತ್ತಾಳೆ. ನಂತರ ನಾನು ನನ್ನ ದ್ವಿಚಕ್ರ ವಾಹನದಲ್ಲಿ ನಮ್ಮ ಮನೆ ಕಡೆಗೆ ಬರುತ್ತಿದ್ದಾಗ ದಾರಿಯಲ್ಲಿ ಚಾಸಾ-11/ಗಣಪತಿ ರವರು ಸಿಕ್ಕಿದ್ದು, ಅವರನ್ನು ಸಹ ನನ್ನ ದ್ವಿಚಕ್ರ ವಾಹನದಲ್ಲಿ ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತೇನೆ. ನಂತರ ನಮ್ಮ ಮನೆಯ ಬಾಗಿಲು ಮುಚ್ಚಿತ್ತು. ಅಲ್ಲಿಯೆ ಅಕ್ಕಪಕ್ಕದಲ್ಲಿ ನೋಡಿದಾಗ ನನ್ನ ತಾಯಿ/ಬಾಯವ್ವ ಬಟ್ಟೆ ತೊಳೆಯುವ ಸ್ಥಳದ ಹತ್ತಿರ ಬಿದ್ದಿದ್ದಳು. ನಂತರ ನಾನು ಮತ್ತು ಚಾಸಾ-11 ರವರು ಹತ್ತಿರ ಹೋಗಿ ನೋಡಿದಾಗ ನನ್ನ ತಾಯಿಗೆ ತಲೆಯ ಮೇಲೆ ಮತ್ತು ಮುಖದ ಮೇಲೆ ತೀವ್ರವಾದ ಪೆಟ್ಟಾಗಿ ಸ್ಥಳದಲ್ಲಿ ರಕ್ತದ ಕಲೆಗಳು ಆಗಿದ್ದವು ಮತ್ತು ಆಕೆ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ನಂತರ ಚಾಸಾ-11 ರವರಿಗೆ ಮನೆಯಲ್ಲಿ ಆರೋಪಿತಳು/ಚಿಕ್ಕಮ್ಮ ಇರಬಹುದು ನೀರು ತೆಗೆದುಕೊಂಡು ಬಾ ಎಂದು ತಿಳಿಸಿರುತ್ತೇನೆ. ನಂತರ ಚಾಸಾ-11 ರವರು ಮನೆಯಿಂದ ನೀರು ತೆಗೆದುಕೊಂಡು ಬಂದಿದ್ದು, ನಾನು ನನ್ನ ತಾಯಿಗೆ ನೀರು ಕುಡಿಸಲು ಪ್ರಯತ್ನಿಸಿದಾಗ ಆಕೆ ನೀರು ಕುಡಿಯಲಿಲ್ಲ. ನಂತರ ಚಾಸಾ-8 ರವರಿಗೆ ಕರೆ ಮಾಡಿ ನನ್ನ ತಾಯಿ ಬಿದ್ದು ಪೆಟ್ಟು ಮಾಡಿಕೊಂಡಿರುತ್ತಾಳೆ ಬುಲೆರೊ ವಾಹನ ತೆಗೆದುಕೊಂಡು ಬಾ ಎಂದು ತಿಳಿಸಿರುತ್ತೇನೆ. ನಂತರ ಚಾಸಾ-8 ರವರ ವಾಹನದಲ್ಲಿ ನನ್ನ ತಾಯಿಯನ್ನು

ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತೇವೆ. ಅದೇ ದಿನ ಮಧ್ಯಾಹ್ನ 2 ಗಂಟೆಗೆ ನನ್ನ ತಾಯಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ.

6. ನಂತರ ನನ್ನ ತಾಯಿಯ ತಲೆಗೆ ಆದ ಪೆಟ್ಟುಗಳ ಬಗ್ಗೆ ವೈದ್ಯರನ್ನು ಮತ್ತು ಹಿರಿಯರನ್ನು ವಿಚಾರಿಸಿದಾಗ ನನ್ನ ತಾಯಿಗೆ ಯಾರೊ ಹೊಡೆದಿರಬಹುದು ಎಂದು ಹೇಳಿದ್ದರಿಂದ ಹಾಗೂ ಆಕೆಯ ಮರಣದಲ್ಲಿ ಸಂಶಯ ವ್ಯಕ್ತ ಪಡಿಸಿ ಆಕೆಗೆ ಯಾರೊ ಹೊಡೆದಿರಬಹುದು ಎಂದು ತಿಳಿದು ಪೊಲೀಸ ಠಾಣೆಗೆ ಭೇಟಿ ನೀಡಿ ವರದಿ ನೀಡಿರುತ್ತೇನೆ. ಸಾಕ್ಷಿ ಸದರಿ ವರದಿಯ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು.

7. ನಂತರ ಸದರಿ ವರದಿ ನೀಡಿದ ನಂತರ ಪೊಲೀಸರು ಬಾಗಲಕೋಟೆ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಬಂದು ನನ್ನ ತಾಯಿಯ ಮೃತದೇಹದ ಮೇಲೆ ಪಂಚರ ಸಮಕ್ಷಮ ಶವ ಪಂಚನಾಮೆ ಮಾಡಿರುತ್ತಾರೆ. ಶವ ಪಂಚನಾಮೆ ಕಾಲಕ್ಕೆ 5 ಭಾವಚಿತ್ರಗಳನ್ನು ಸಹ ತೆಗೆಯಲಾಯಿತು. ಸದರಿ ಭಾವಚಿತ್ರಗಳನ್ನು ಒಟ್ಟಾಗಿ ನಿಶಾನೆ ಪಿ-2 ಎಂದು ಗುರುತಿಸಲಾಯಿತು. ಮರುದಿನ ಬೆಳಿಗ್ಗೆ ಸುಮಾರು 10 ಗಂಟೆಗೆ ನನ್ನ ತಾಯಿಯ ಮೃತದೇಹವನ್ನು ಮರಣೋತ್ತರ ಪರೀಕ್ಷೆ ನಂತರ ಅಂತ್ಯಕ್ರಿಯೆಗಾಗಿ ನಮಗೆ ನೀಡಿದ್ದು, ನಮ್ಮ ಊರಿನಲ್ಲಿ ಅಂತ್ಯ ಸಂಸ್ಕಾರ ಮಾಡಿರುತ್ತೇವೆ.

8. ನಂತರ ನಮ್ಮ ಊರಿನಲ್ಲಿ ನನ್ನ ಚಿಕ್ಕಮ್ಮ/ಆರೋಪಿತಳು ನನ್ನ ತಾಯಿಯ ಕೊಲೆ ಮಾಡಿರಬಹುದು ಎಂದು ಮಾತನಾಡಿಕೊಳ್ಳುತ್ತಿದ್ದರು. ಅದೇ ದಿನ ಮಧ್ಯಾಹ್ನ 1 ಗಂಟೆಗೆ ಪೊಲೀಸರು ನಮ್ಮ ಮನೆ ಹತ್ತಿರ ಬಂದು, ನನ್ನ ತಾಯಿ ಮೃತಪಟ್ಟ ಸ್ಥಳವನ್ನು ತೋರಿಸುವಂತೆ ತಿಳಿಸಿದರು. ನಂತರ ಪೊಲೀಸರಿಗೆ ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಪೊಲೀಸರು ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ, ಸ್ಥಳದಲ್ಲಿ ಬಿದ್ದಿದ್ದ ರಕ್ತ ಕಲೆಯಾದ ಒಂದು ದೊಡ್ಡಕಲ್ಲು ಮತ್ತು ಒಂದು ಸಣ್ಣ ಕಲ್ಲು, ರಕ್ತ ಹತ್ತಿದ ಮಣ್ಣು, ಮಾದರಿ ಮಣ್ಣು, ಹತ್ತಿಯಿಂದ ಸಂಗ್ರಹಿಸಿದ ರಕ್ತ ಹಾಗೂ ಮಾದರಿ ಹತ್ತಿಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಪಂಚನಾಮೆ ಕಾಲಕ್ಕೆ 4 ಭಾವಚಿತ್ರಗಳನ್ನು ತೆಗೆಯಲಾಯಿತು. ಸಾಕ್ಷಿ ಸದರಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಶಾನೆ ಪಿ-3 ಎಂದು ಗುರುತಿಸಲಾಯಿತು.ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡ ಒಂದು ದೊಡ್ಡಕಲ್ಲು ಮತ್ತು ಒಂದು ಸಣ್ಣ ಕಲ್ಲು, ರಕ್ತ ಹತ್ತಿದ ಮಣ್ಣು, ಮಾದರಿ ಮಣ್ಣು, ಹತ್ತಿಯಿಂದ ಸಂಗ್ರಹಿಸಿದ ರಕ್ತ ಹಾಗೂ ಮಾದರಿ ಹತ್ತಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು ಮಾಲು-1 ರಿಂದ 6 ಎಂದು ಗುರುತಿಸಲಾಯಿತು.

9. ಇದಾದ ಮರುದಿನ ನಾನು ಮಧ್ಯಾಹ್ನ 1 ಗಂಟೆಗೆ ನಮ್ಮ ಜಮೀನಗೆ ಹೋಗಿದ್ದಾಗ ಚಾಸಾ-8 ರವರು ನಮ್ಮ ಜಮೀನಗೆ ಬಂದು, ಆತನು ನಮ್ಮ ಮನೆಗೆ ಹೋಗಿದ್ದಾಗ ಮನೆಯಲ್ಲಿ ಎಲ್ಲರೂ ಜಮೀನಗೆ ಹೋಗಿರುತ್ತಾರೆ ಎಂದು ಆತನಿಗೆ ನಮ್ಮ ಚಿಕ್ಕಮ್ಮ/ಆರೋಪಿತಳು ತಿಳಿಸಿ, ಆತನನ್ನು ನೋಡಿ ಗಾಬರಿಯಿಂದ ಅಳಲು ಪ್ರಾರಂಭಿಸಿ ಆಕೆಯ ಅಕ್ಕ/ಬಾಯವ್ವ ಳಿಗೆ ಆಕೆ ಹೊಡೆದಿರುವುದಾಗಿ ತಿಳಿಸಿದಾಗ, ಏಕೆ ಹೊಡೆದೆ ಎಂದು ವಿಚಾರಿಸಿದಾಗ ಲಕ್ಷ್ಮೀಳನ್ನು ನನಗೆ ಮದುವೆ ಮಾಡುವದು ಬೇಡ ಎಂದು ಹೇಳಿದ್ದರೂ ಸಹ ಈಗ ನನ್ನ ಮಗನ ತಲೆಯನ್ನು ಕೆಡಿಸಿರುತ್ತಿ ಎಂದು ಹೇಳಿದಾಗ, ಆಕೆ ನಾನು ಏಕೆ ತಲೆ ಕೆಡಿಸಲಿ ಎಂದು ಹೇಳಿದಾಗ, ನನ್ನ ತಾಯಿ ಬಟ್ಟೆ ತೊಳೆಯಲು ಹೋದಾಗ, ನನ್ನ ಚಿಕ್ಕಮ್ಮ/ಆರೋಪಿ ಬಟ್ಟೆ ತೊಳೆಯುವ ಜಾಗದ ಹತ್ತಿರ ಬಿದ್ದಿದ್ದ ತೆಂಗಿನ ಕಾಯಿ ತೆಗೆದುಕೊಳ್ಳಲು ಹೋದಾಗ ನನ್ನ ತಾಯಿ ಆರೋಪಿತಳನ್ನು ಕುರಿತು ಆಕೆಗೆ ಮಕ್ಕಳಾಗಿರುವುದಿಲ್ಲ ಎಂದು ಗೊಡ್ಡ ಹಡಸು ಎಂದು ಬೈದಿರುತ್ತಾಳೆ. ಅದಕ್ಕೆ ನನ್ನ ಚಿಕ್ಕಮ್ಮ/ಆರೋಪಿತಳು ಸಿಟ್ಟು ಮಾಡಿಕೊಂಡು ಅಲ್ಲಿಯೆ ಪಕ್ಕದಲ್ಲಿದ್ದ ಕಬ್ಬಿಣದ ರಾಡ್ ದಿಂದ ನನ್ನ ತಾಯಿಯ ತಲೆಗೆ ಹೊಡೆದು ಗಾಯಪಡಿಸಿರುತ್ತಾಳೆ ಎಂದು ಆತನಿಗೆ ತಿಳಿಸಿದ ಬಗ್ಗೆ ಚಾಸಾ-8 ನನಗೆ ತಿಳಿಸಿರುತ್ತಾನೆ.

10. ನಂತರ ಈ ವಿಚಾರ ತಿಳಿದು ನನ್ನ ಸಂಬಂಧಿಕರ ಜೊತೆ ಚರ್ಚೆ ಮಾಡಿ ಮರುದಿನ ಪೊಲೀಸ ಠಾಣೆಗೆ ಭೇಟಿ ನೀಡಿ ನನ್ನ ಚಿಕ್ಕಮ್ಮ/ಆರೋಪಿತಳ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ನನ್ನ ಚಿಕ್ಕಮ್ಮ/ಆರೋಪಿತಳನ್ನು ವಶಕ್ಕೆಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃಶ್ರೀ. ಪಿ ಹೆಚ್ ಎಂ ವಕೀಲರಿಂದ** ಆರೋಪಿತಳ ಪರ

ನಾನು ಬಿ.ಎ ಪದವೀಧರನಾಗಿರುತ್ತೇನೆ. ನನ್ನ ಅಜ್ಜ/ಬಸಪ್ಪ ರವರಿಗೆ 4 ಜನ ಅಣ್ಣತಮ್ಮಂದಿರು ಎಂದರೆ ಸರಿ. ನನ್ನ ಅಜ್ಜನ ಇಬ್ಬರು ಅಣ್ಣತಮ್ಮಂದಿರು ಬೇರೆ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ/ಬಸಪ್ಪ ಮತ್ತು ಆತನ ಸಹೋದರ ಸಂಗಪ್ಪ ನಮ್ಮ ತೋಟದ ಮನೆಯಲ್ಲಿ ವಾಸವಾಗಿದ್ದರು. ನನ್ನ ಅಜ್ಜನ ಸಹೋದರ ಸಂಗಪ್ಪನಿಗೆ 5 ಜನ ಮಕ್ಕಳು ಎಂದರೆ ಸರಿ. ಸಂಗಪ್ಪನಿಗೆ ಮಲ್ಲಪ್ಪ ಎಂಬ ಮಗ ಇದ್ದು, ಆತನೂ ಸಹ ನಮ್ಮ ಜಮೀನಿನಲ್ಲಿ ಮನೆ ಮಾಡಿಕೊಂಡು ವಾಸವಾಗಿರುತ್ತಾನೆ ಎಂದರೆ ಸರಿ. ಮಲ್ಲಪ್ಪ ಕಾರಾಗೃಹದಲ್ಲಿ ಪೊಲೀಸ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾನೆ ಎಂದರೆ ಸರಿ. ಮಲ್ಲಪ್ಪನ ಹೆಂಡತಿ ಮತ್ತು ಮಕ್ಕಳು ನಮ್ಮ ಜಮೀನಿನಲ್ಲಿ ಇರುವ

ಮತ್ತೊಂದು ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಬಸಪ್ಪನಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು, ಅವರುಗಳೆಂದರೆ ನನ್ನ ತಂದೆ ಮತ್ತು ಚಾಸಾ-10 ಹಾಗು ಹಾಗೂ ನೀಲವ್ವ ಎಂದರೆ ಸರಿ.

2. ನನ್ನ ಅಜ್ಜನ ಸಹೋದರ ಸಂಗಪ್ಪನ ಮಗಳು ಅನ್ನಪೂರ್ಣ ರವರ ಮಗಳು ಲಕ್ಷ್ಮೀ ಎಂದರೆ ಸರಿ. ಲಕ್ಷ್ಮೀ ಎನ್ನುವವರು ನನ್ನ ಸೋದರತ್ತೆ ಅನ್ನಪೂರ್ಣ ರವರ ಮಗಳು ಎಂದರೆ ಸರಿ. ನನ್ನ ಚಿಕ್ಕಮ್ಮ/ಆರೋಪಿ, ನನ್ನ ತಂದೆ ಮತ್ತು ಚಾಸಾ-10 ರವರು ಒಂದು ಗುಂಪು ಎಂದರೆ ಸರಿ. ನನ್ನ ಚಿಕ್ಕಮ್ಮ/ಆರೋಪಿಗೆ ಮಕ್ಕಳಿಲ್ಲದೆ ಇದ್ದ ಕಾರಣದಿಂದ ನನ್ನನ್ನು ಆಕೆಯ ಮಗ ಎಂದು ಸಾಕುತ್ತಿದ್ದಳು ಎಂದರೆ ಸರಿ. ಈ ಕಾರಣದಿಂದ ನನ್ನ ತಾಯಿ ಬಾಯವ್ವ ನನಗೆ ಆರೋಪಿತಳ ಮಾತು ಕೇಳಬೇಡ ಎಂದು ಹೇಳುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ತಾಯಿ ಬಾಯವ್ವ ಆರೋಪಿತಳಿಗೆ ನನ್ನ ಮಗನ ತಲೆ ಕೆಡಿಸಬೇಡ ಎಂದು ಬೈಯುತ್ತಿದ್ದಳು ಎಂದರೆ ಸರಿ. ಈ ಕಾರಣದಿಂದ ನಾನು ನನ್ನ ತಾಯಿ ಬಾಯವ್ವಳಿಗೆ ಆರೋಪಿತಳಿಗೆ ಬೈಯಬೇಡ ಆಕೆ ನನ್ನ ಒಳ್ಳೆಯದನ್ನು ಬಯಸುತ್ತಾಳೆ ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ತಾಯಿ ಬಾಯವ್ವ ಆರೋಪಿತಳ ಮಾತು ಕೇಳಬೇಡ ಎಂದು ನನಗೆ ಬೈಯುತ್ತಿದ್ದಳು ಎಂದರೆ ಸರಿ.

3. ನನ್ನ ತಾಯಿ ಬಾಯವ್ವಳಿಗೆ ನನ್ನ ಚಿಕ್ಕಮ್ಮ/ಆರೋಪಿತಳನ್ನು ನಮ್ಮ ಜೊತೆಯಲ್ಲಿ ಕಾರ್ಯಕ್ರಮಗಳಿಗೆ ಕರೆದುಕೊಂಡು ಹೋಗುವ ವಿಷಯವಾಗಿ ತಾತ್ಸಾರ ಇತ್ತು ಎಂದರೆ ಸರಿ. ನಾನು ಮತ್ತು ಆರೋಪಿ ಆಕೆಯ ಮಾತನ್ನು ಕೇಳುವುದಿಲ್ಲ ಎಂದು ಹೇಳಿ ಹಲವು ಬಾರಿ ನನ್ನ ತಾಯಿ ಉಪವಾಸ ಇರುತ್ತಿದ್ದಳು ಎಂದರೆ ಸರಿಯಲ್ಲ. ನಾನು ನನ್ನ ತಾಯಿಗೆ ಉಪವಾಸ ಇರಬೇಡ ಎಂದು ಹಲವು ಬಾರಿ ಬೈದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಹಲವು ಬಾರಿ ಮನೆಯಲ್ಲಿ ತಲೆಸುತ್ತಿ ಬಿದ್ದಿದ್ದಳು ಎಂದರೆ ಸರಿಯಲ್ಲ.

4. ನಮ್ಮ ಜಮೀನು ರಸ್ತೆಯಿಂದ ಪೂರ್ವ-ಪಶ್ಚಿಮ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ನಮ್ಮ ಜಮೀನಿನ ಒಳಗೆ ಒಂದು ಪರ್ಲಾಂಗ ಹೋದ ನಂತರ ಉತ್ತರ-ದಕ್ಷಿಣಕ್ಕೆ ನಮ್ಮ ತೋಟದ ಮನೆ ಇರುತ್ತದೆ ಎಂದರೆ ಸರಿ. ನಮ್ಮ ಮನೆಯ ಅಕ್ಕಪಕ್ಕದಲ್ಲಿ 6 ಮನೆ ಮತ್ತು ಎರಡು ದನದ ಕೊಟ್ಟಿಗೆ ಇರುತ್ತವೆ ಎಂದರೆ ಸರಿ. ನಮ್ಮ ತೋಟದ ಮನೆಯಲ್ಲಿ ಎರಡು ಭಾಗ ಇದ್ದು, ಒಂದು ಭಾಗದಲ್ಲಿ ನನ್ನ ಚಿಕ್ಕಪ್ಪ ಮತ್ತು ಆರೋಪಿತಳು ವಾಸವಾಗಿರುತ್ತಾರೆ ಎಂದರೆ ಸರಿ.

5. ನನ್ನ ಚಿಕ್ಕಮ್ಮ/ಆರೋಪಿತಳು ನಾವು ಮನೆಯಲ್ಲಿ ಇಲ್ಲದ ಸಮಯದಲ್ಲಿ ಮನೆಯಿಂದ ಹೊರಗೆ ಬರುತ್ತಿರಲಿಲ್ಲ ಎಂದರೆ ಸರಿ. ನಾನು ನನ್ನ ತಾಯಿಯ ಬಳಿ ಇದ್ದಾಗ ಆರೋಪಿತಳು ನೀರನ್ನು ತೆಗೆದುಕೊಂಡು ಬಂದು ಚಾಸಾ-11 ರವರಿಗೆ ಕೊಟ್ಟು ಅಲ್ಲಿಂದ ವಾಪಸ್ಸು ಹೋಗಿರುತ್ತಾರೆ. ಮನೆಯಲ್ಲಿ ನನ್ನ ತಂಗಿಯ ಮಗಳು ಅಳುತ್ತಿದ್ದಾಳೆ ಎಂದು ಹೇಳಿ ನನ್ನ ಚಿಕ್ಕಮ್ಮ/ ಆರೋಪಿ ಮನೆಯ ಒಳಗೆ ವಾಪಸ್ಸು ಹೋಗಿರುತ್ತಾಳೆ ಎಂದರೆ ಸರಿ.

6. ನನ್ನ ತಾಯಿಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಆಕೆ ಇನ್ನೂ ಉಸಿರಾಡುತ್ತಿದ್ದಳು. ನನ್ನ ತಾಯಿ ಬಿದ್ದು ಪೆಟ್ಟು ಮಾಡಿಕೊಂಡಿದ್ದು, ಆಕೆಯನ್ನು ಚಿಕಿತ್ಸೆಗಾಗಿ ಕರೆದುಕೊಂಡು ಬಂದಿರುತ್ತೇನೆ ಎಂದು ವೈದ್ಯರಿಗೆ ತಿಳಿಸಿರುತ್ತೇನೆ. ವೈದ್ಯರು ನನ್ನ ತಾಯಿಗೆ ಪ್ರಥಮ ಚಿಕಿತ್ಸೆ ಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾಯಿಯನ್ನು ಆಸ್ಪತ್ರೆಗೆ ದಾಖಲಿಸಿದ ನಂತರ ಎಂ ಎಲ್ ಸಿ ಸಹ ಆಗಿರುತ್ತದೆ ಎಂದರೆ ಸರಿ. ನನ್ನ ತಾಯಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ ಮೃತಪಟ್ಟಿರುತ್ತಾಳೆ ಎಂದರೆ ಸರಿ. ನನ್ನ ತಾಯಿ ಮೃತಪಟ್ಟ ದಿನವೆ ಪೊಲೀಸ ಠಾಣೆಗೆ ನಿಶಾನೆ ಪಿ-1 ರಂತೆ ವರದಿ ನೀಡಿರುತ್ತೇನೆ ಎಂದರೆ ಸರಿ. ಸದರಿ ವರದಿಯಲ್ಲಿ ನನ್ನ ತಾಯಿ ತಲೆಸುತ್ತಿ ಕಲ್ಲಿನ ಮೇಲೆ ಬಿದ್ದು ಮೃತಪಟ್ಟಿರಬಹುದು ಎಂದು ತಿಳಿಸಿರುತ್ತೇನೆ ಎಂದರೆ ಸರಿ. ನನ್ನ ತಾಯಿಯ ಶವ ಪರೀಕ್ಷೆಯನ್ನು ಯಾವ ಸಮಯದಲ್ಲಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಶವವನ್ನು ಪೊಲೀಸರು ಮರುದಿನ ಬೆಳಿಗ್ಗೆ ಸುಮಾರು 10 ಗಂಟೆಗೆ ನೀಡಿರುತ್ತಾರೆ.

7. ಪೊಲೀಸರು ಘಟನಾ ಸ್ಥಳಕ್ಕೆ ಪಂಚನಾಮೆ ಜರುಗಿಸಲು ಬಂದಿದ್ದಾಗ ನಾನು ಪೊಲೀಸರಿಗೆ ನಮ್ಮ ಊರಿನವರು ಆರೋಪಿತಳು ನನ್ನ ತಾಯಿಯ ಕೊಲೆ ಮಾಡಿರಬಹುದು ಎಂದು ಮಾತನಾಡಿಕೊಳ್ಳುತ್ತಿದ್ದ ವಿಚಾರವನ್ನು ತಿಳಿಸಿರುವುದಿಲ್ಲ ಎಂದರೆ ಸರಿ. ನನ್ನ ಚಿಕ್ಕಮ್ಮ/ಆರೋಪಿತಳು ನನ್ನ ತಾಯಿಯ ಅಂತ್ಯಕ್ರಿಯೆ ಸಮಯದಲ್ಲಿ ಜೊತೆಯಲ್ಲಿಯೆ ಇದ್ದಳು ಎಂದರೆ ಸರಿ. ಆ ಸಮಯದಲ್ಲಿ ನಾನು ನನ್ನ ಚಿಕ್ಕಮ್ಮ/ಆರೋಪಿತಳ ಜೊತೆ ಚೆನ್ನಾಗಿ ಇದ್ದೆ ಎಂದರೆ ಸರಿ.

8. ಪೊಲೀಸರು ನನ್ನ ಮತ್ತು ಚಾಸಾ-8 ರವರ ಮೇಲೆ ನನ್ನ ತಾಯಿಯ ಕೊಲೆಯ ವಿಚಾರವಾಗಿ ಸಂಶಯ ಪಟ್ಟಿದ್ದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ಪೊಲೀಸರು ವಿಚಾರಣೆ ಮಾಡಲು ನನ್ನನ್ನು ಮತ್ತು ಚಾಸಾ-8 ರವರನ್ನು ಠಾಣೆಗೆ ಕರೆಯಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ತಾಯಿಗೆ ಯಾರೂ ಹೊಡೆದಿರುವುದಿಲ್ಲ, ಆಕೆ ತಾನಾಗಿಯೆ ಕಲ್ಲಿನ ಮೇಲೆ ಬಿದ್ದು ಮೃತಪಟ್ಟಿರುತ್ತಾಳೆ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ನಮ್ಮ ಊರಿನ ಹಿರಿಯರನ್ನು ಕರೆಯಿಸಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಮ್ಮ

ಊರಿನ ಹಿರಿಯರು ಪೊಲೀಸರಿಗೆ ನನ್ನ ಮತ್ತು ಚಾಸಾ-10 ರವರ ಯಾವುದೇ ಭಾಗ ಇರುವುದಿಲ್ಲ ಎಂದು ತಿಳಿಸಿ ನಮ್ಮನ್ನು ಮನೆಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನ್ನನ್ನನ್ನು ಮತ್ತು ಚಾಸಾ-8 ರವರನ್ನು 2 ದಿನಗಳ ಕಾಲ ಠಾಣೆಯಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ.

9. ನನ್ನ ತಂದೆ ಮತ್ತು ಚಾಸಾ-10 ರವರು 2009 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಿಭಾಗದ ನಂತರ ಅವರಿಗೆ ಸೇರಿದ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. 2009 ರ ನಂತರ ಚಾಸಾ-10 ಮತ್ತು ಆರೋಪಿತಳಿಗೆ ಮಕ್ಕಳಿಲ್ಲ ಅವರಿಗೆ ಸೇರಿದ ಆಸ್ತಿಯನ್ನು ನಮಗೆ ಕೊಡುವಂತೆ ಕೇಳುತ್ತಿದ್ದೆವು ಎಂದರೆ ಸರಿಯಲ್ಲ. ಅದಕ್ಕೆ ಆರೋಪಿತಳು ಅವರು ಜೀವಂತವಾಗಿರುವ ವರೆಗೂ ಆಸ್ತಿ ಚಾಸಾ-10 ರವರ ಹೆಸರಿನಲ್ಲಿರಲಿ ನಂತರ ನನ್ನ ಹೆಸರಿಗೆ ಕೊಡುತ್ತೇನೆ ಎಂದು ಹೇಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಚಿಕ್ಕಮ್ಮ/ಆರೋಪಿ ಜಮೀನಿನ ವಿಚಾರವಾಗಿ ನಮಗೆ ಅಡಚಣೆ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಈ ಕಾರಣದಿಂದ ಆರೋಪಿತಳ ವಿರುದ್ಧ ದೂರು ದಾಖಲಿಸಿದರೆ ಆಸ್ತಿ ನಮಗೆ ಬರುತ್ತದೆ ಎಂದು ತಿಳಿದು ಆಕೆ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

10. ಆರೋಪಿತಳು ಜೈಲಿನಲ್ಲಿದ್ದಾಗ ನಾನು ದಿಃ 20.09.2023 ರಂದು ಭಾಗ ಕೇಳಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಬಾಗಲಕೋಟದಲ್ಲಿ ನನ್ನ ತಂದೆ ಮತ್ತು ಚಾಸಾ-10 ರವರ ವಿರುದ್ಧ ಅಸಲು ದಾವೆ ನಂ.268/2023 ನ್ನು ಹೂಡಿರುತ್ತೇವೆ ಎಂದರೆ ಸರಿ. ದಿಃ 27.10.2023 ರಂದು ಸದರಿ ಪ್ರಕರಣದ ಮುಂದಿನ ದಿನಾಂಕ ನಿಗದಿಯಾಗಿತ್ತು ಎಂದರೆ ಸರಿ. ನಂತರ ದಿಃ 30.09.2023 ರಂದು ಸದರಿ ಪ್ರಕರಣವನ್ನು ಮುಂಗಡವಾಗಿ ಬೋರ್ಡ ಮೇಲೆ ತೆಗೆದುಕೊಂಡು ಅದರಲ್ಲಿ ಅಪಸಾತ ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ರಾಜೀ ಪ್ರಕರಣದಲ್ಲಿ ಚಾಸಾ-10 ರವರಿಗೆ ಸೇರಿದ ಎಲ್ಲಾ ಆಸ್ತಿಗಳನ್ನು ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆರೋಪಿತಳು ಹೊರಗೆ ಬಂದರೆ ರಾಜಿಗೆ ತೊಂದರೆ ಆಗುತ್ತದೆ ಎಂದು ತಿಳಿದು, ಆಕೆ ಜೈಲಿನಲ್ಲಿದ್ದಾಗ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

11. ಆರೋಪಿತಳು ಜಾಮೀನಿನ ಮೇಲೆ ಜೈಲಿನಿಂದ ಹೊರಗೆ ಬಂದ ನಂತರ ನನ್ನ ಮೇಲೆ ದೂರು ದಾಖಲಿಸಿದ್ದಳು ಎಂದರೆ ಸರಿ. ಸದರಿ ದೂರಿನಲ್ಲಿ ನಾನು ಚಾಸಾ-10 ರವರಿಗೆ ಮೋಸ ಮಾಡಿ ಎಲ್ಲಾ ಆಸ್ತಿಗಳನ್ನು ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದು ಹೇಳಿದ್ದಳು ಎಂದರೆ ಸರಿ. ಈಗಲೂ ಸಹ ಚಾಸಾ-10 ರವರು ಅವರ ಆಸ್ತಿಯನ್ನು ಅವರಿಗೆ ಬಿಟ್ಟುಕೊಡುವಂತೆ ನನಗೆ

ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-10 ರವರ ಹೆಸರಿನಲ್ಲಿದ್ದ ಎಲ್ಲಾ ಆಸ್ತಿಗಳನ್ನು ಈಗ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಈ ಕಾರಣದಿಂದ ನನ್ನ ತಾಯಿಯನ್ನು ಆರೋಪಿತಳು ಹಲ್ಲೆ ಮಾಡದಿದ್ದರೂ ಸಹ ಆಕೆ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

12. ಚಾಸಾ-8 ರವರು ದಿಃ 11.08.2023 ರಂದು ನಾನು ಜಮೀನಿನಲ್ಲಿ ಇದ್ದಾಗ ನನ್ನ ತಾಯಿಗೆ ಆರೋಪಿತಳು ಹೊಡೆದ ವಿಚಾರವನ್ನು ನನಗೆ ತಿಳಿಸಿರುತ್ತಾರೆ. ಸದರಿ ದಿನ ನಾನು ವಿಚಾರ ತಿಳಿದು ಆರೋಪಿತಳ ವಿರುದ್ಧ ದೂರನ್ನು ಕೊಡಲು ಪ್ರಯತ್ನಿಸಿರುವುದಿಲ್ಲ. ಆ ಸಮಯದಲ್ಲಿ ಚಾಸಾ-8 ಬಸಪ್ಪ ಸುಳ್ಳು ಹೇಳುತ್ತಿರಬಹುದು ಎಂದು ಅಂದುಕೊಂಡಿದ್ದೆ ಎಂದರೆ ಸರಿಯಲ್ಲ.

13. ನಮ್ಮ ತೋಟದ ಮನೆಯ ಅಕ್ಕಪಕ್ಕದಲ್ಲಿ ಬೇರೆ ಮನೆಗಳು ಇರುತ್ತವೆ ಎಂದರೆ ಸರಿ. ನಮ್ಮ ಮನೆಯಲ್ಲಿ ಯಾವುದೇ ಗಲಾಟೆ ಆದರೆ ಅಕ್ಕಪಕ್ಕದ ಮನೆಗೆ ಕೇಳಿಬರುತ್ತದೆ ಎಂದರೆ ಸರಿ. ದಿಃ 12.08.2023 ರಂದು ದೂರು ನೀಡಲು ಮಧ್ಯಾಹ್ನ ಸುಮಾರು 3 ಗಂಟೆಗೆ ಹೋಗಿದ್ದೆ.

**(ನ್ಯಾಯಾಲಯದ ಬೆಳಗಿನ ಅವಧಿ ಮುಕ್ತಾಯವಾಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು)**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

**ಸತ್ರ ಮೊಕದ್ದಮೆ ಸಂ. 80/2023**

**ಫ್ರಾಸಾ-1**

ದಿಃ 23.07.2025 ರಂದು ಸಾಕ್ಷಿಯನ್ನು ಮಧ್ಯಾಹ್ನ 2-45 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ. ಪಿ ಹೆಚ್ ಎಂ ವಕೀಲರಿಂದ** ಆರೋಪಿತಳ ಪರ

14. ನಾನು ದಿಃ 12.08.2023 ರಂದು ಪೊಲೀಸ ಠಾಣೆಗೆ ಹೋಗಿದ್ದಾಗ ಸಂಜೆ ಸುಮಾರು 7 ಗಂಟೆಯವರೆಗೆ ಇದ್ದೆ. ನಿಶಾನೆ ಪಿ-4 ದೂರನ್ನು ಪೊಲೀಸ ಠಾಣೆಯಲ್ಲಿ ಬರೆದಿರುತ್ತೇನೆ. ಪೊಲೀಸರು ಹೇಳಿದಂತೆ ನಿಪಿ-4 ದೂರನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಪಿ-3 ರಲ್ಲಿ ತೋರಿಸಿರುವ ಒಂದು ಚಪ್ಪಡಿ ಕಲ್ಲು ಕಲ್ಲು ಮತ್ತು ಅದರ ಕೆಳಗೆ ಇರುವ ಮತ್ತೊಂದು ಕಲ್ಲುಗಳ ಮೇಲೆ ನನ್ನ ತಾಯಿ ಬಿದ್ದಿದ್ದು, ಕಲ್ಲುಗಳಿಗೆ ರಕ್ತದ ಕಲೆಗಳು ಆಗಿದ್ದವು ಎಂದರೆ ಸರಿ.

15. ಚಾಸಾ-8 ರವರು ನಮ್ಮ ಜಮೀನಗೆ ಬಂದು ನನಗೆ ಆರೋಪಿತಳು ನನ್ನ ತಾಯಿಗೆ ಕಬ್ಬಿಣದ ರಾಡ್ ನಿಂದ ಹಲ್ಲೆ ಮಾಡಿದ ವಿಚಾರವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-4 ದೂರಿನಲ್ಲಿ ಹಿರಿಯರನ್ನು ಕೂಡಿಸಿ ನಂತರ ವಿಚಾರ ಮಾಡಿ ದೂರನ್ನು ದಾಖಲಿಸಿದ ವಿಚಾರವನ್ನು ತಿಳಿಸಿರುವುದಿಲ್ಲ ಎಂದರೆ ಸರಿ. ದೂರನ್ನು ದಾಖಲಿಸಿದ ನಂತರವೂ ಸಹ ನನ್ನ ಚಿಕ್ಕಮ್ಮ /ಆರೋಪಿತಳು ಮನೆಯಲ್ಲಿಯೆ ಇದ್ದಳು ಎಂದರೆ ಸರಿ. ದೂರನ್ನು ದಾಖಲಿಸಿದ ಮರುದಿನ ದಿಃ 13.08.2023 ರಂದು ಸಂಜೆ ಪೊಲೀಸರು ಆರೋಪಿತಳನ್ನು ವಶಕ್ಕೆ ಪಡೆದು ಕರೆದುಕೊಂಡು ಹೋಗಿರುತ್ತಾರೆ. ನಮಗೂ ಮತ್ತು ಆರೋಪಿತಳಿಗೂ ಆಸ್ತಿ ವಿಚಾರವಾಗಿ ತಕರಾರು ಇದ್ದ ಕಾರಣದಿಂದ ಆಕೆ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

.